**ಕರ್ನಾಟಕ ಲೋಕಾಯುಕ್ತ**

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಮ್/1872/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ–18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 25/05/2022.

**ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ**

ವಿಷಯ: ಶ್ರೀ ಪರಶುರಾಮ ಹನುಮಂತಪ್ಪ ಬಾವಿಕಟ್ಟಿ @ ರಡ್ಡಿ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಹೌಸಿಂಗ್ ಬೋರ್ಡ್ ಕಛೇರಿ, ಹಾವೇರಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1) ಹಾವೇರಿ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಪರಶುರಾಮ ಹನುಮಂತಪ್ಪ ಬಾವಿಕಟ್ಟಿ @ ರಡ್ಡಿ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಹೌಸಿಂಗ್ ಬೋರ್ಡ್ ಕಛೇರಿ, ಹಾವೇರಿ ಸರ್ಕಾರಿ/ಸಾರ್ವಜನಿಕ ನೌಕರಾಗಿರುತ್ತಾರೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಶ್ರೀ ದೀಪಕ ತಂದೆ ಯಲ್ಲಪ್ಪ ಹೊನ್ನಪ್ಪನವರ, ಸಾ: ಮಂಜುನಾಥೈ ನಗರ, ಹಾವೇರಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2) <u>ಪ್ರಕರಣದ ಸಂಕ್ಷಿಪ್ತ ಸಾರಾಂಶ</u>:– ಶ್ರೀ ದೀಪಕ ತಂದೆ ಯಲ್ಲಪ್ಪ ಹೊನ್ನಪ್ಪನವರ, ಸಾ: ಮಂಜುನಾಥೈ ನಗರ, ಹಾವೇರಿ (ಇನ್ನು ಮುಂದೆ ದೂರುದಾರರು ಎಂದು ಉಲ್ಲೇಖಿಸಲಾಗುವುದು).ದೂರುದಾರರು ಬೇರೆ ಬೇರೆ ಇಲಾಖೆಗಳಿಗೆ ತನ್ನ ಕಾರುಗಳನ್ನು ಬಾಡಿಗೆಗೆ ಕೊಟ್ಟಿರುತ್ತಾರೆ. ದೂರುದಾರರು ತನ್ನ ವಾಹನ ಸಂಖ್ಯೆ ಕೆ.ಎ. 27–ಬಿ–1962 ಟಾಟಾ ಇಂಡಿಕಾ ಕಾರನ್ನು ಕರ್ನಾಟಕ ಹೌಸಿಂಗ್ ಬೋರ್ಡ್ ಜಿಲ್ಲಾ ಯೋಜನಾ ಕಛೇರಿಗೆ ಮಲ್ಲಿಕ್ ಟ್ರಾವೆಲ್ಸ್ ಏಜನ್ಸಿರವರ ಮೂಲಕ ಬಾಡಿಗೆ ಆಧಾರಿತವಾಗಿ ಪೂರೈಸಿರುತ್ತಾರೆ. ಈ ವಾಹನಕ್ಕೆ ಸಂಬಂಧಪಟ್ಟ ಮೂರು ತಿಂಗಳ ಬಿಲ್ ಮೊತ್ತ ರೂ. 70,380/– ಬಿಡುಗಡೆಯಾಗಿರುತ್ತದೆ. ಸದರಿ ಮೊತ್ತದ ಚೆಕ್ಕನ್ನು ದೂರುದಾರರಿಗೆ ದಿ: 23/05/2019 ರಂದು ನೀಡಲಾಗಿದ್ದು ಆ ಸಮಯದಲ್ಲಿ ಕಛೇರಿಯ ಕ್ಲರ್ಕ್ ಆದ ಎದುರುದಾರರು ದೂರುದಾರರಿಗೆ ನಿಮ್ಮ ಅಕೌಂಟಿಗೆ ಚೆಕ್ಕಿನ ಹಣ ಜಮಾ ಆದ ಮೇಲೆ ನನಗೆ ಮತ್ತು ಮೇಲಾಧಿಕಾರಿಗಳಿಗೆ ರೂ. 20,000/–

ಹಣ ಕೊಡಬೇಕು ಅಂದ್ರೆ ಮಾತ್ರ ನಾನು ನಿನಗೆ ಮುಂದಿನ ಚೆಕ್ ಕೊಡುತ್ತೇನೆ ಮತ್ತು ಉಳಿದ ಬಿಲ್ಲುಗಳನ್ನು ಮಾಡಿಕೊಡುತ್ತೇನೆ ಎಂದು ಹೇಳಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಅದಕ್ಕೆ ದೂರುದಾರರು ಆಯಿತು ಎಂದು ಹೇಳಿ ಬಂದಿರುತ್ತಾರೆ. ದಿ: 30/05/2019 ರಂದು ಎದುರುದಾರರು ತಮ್ಮ ಮೊಬೈಲ್ ನಂ. 9740279952 ದಿಂದ ದೂರುದಾರರ ಮೊಬೈಲ್ ಸಂಖ್ಯೆ 9620919666 ಗೆ ಫೋನ್ ಮಾಡಿದ್ದು ಅದು ಮಿಸ್ಡ್ ಕಾಲ್ ಆಗಿರುತ್ತದೆ. ನಂತರ ದೂರುದಾರರು ವಾಪಸ್ ನಿಮಗೆ ಕರೆ ಮಾಡಿದಾಗ ಎದುರುದಾರರು ದೂರುದಾರರಿಗೆ ಹಣ ತೆಗೆದುಕೊಂಡು ಬರುವಂತೆ ಹೇಳಿರುತ್ತಾರೆ. ಅದಕ್ಕೆ ದೂರುದಾರರು ಮಲ್ಲಿಕ್ ಏಜನ್ಸಿರವರಿಂದ ಹಣ ಇಸಿದುಕೊಂಡು ಬಂದು ಕೊಡುತ್ತೇನೆಂದು ಹೇಳಿರುತ್ತಾರೆ. ಪುನ: ಎದುರುದಾರರು ತಮ್ಮ ಮೊಬೈಲ್‌ನಿಂದ ದೂರುದಾರರ ಮೊಬೈಲಿಗೆ ಕರೆ ಮಾಡಿ ದೊಡ್ಡ ಸಾಹೇಬರಿಗೆ ಕೊಡಬೇಕು, ಹಣ ತಂದುಕೊಡು ಎಂದು ಪದೇ ಪದೆ ಕೇಳಿರುತ್ತಾರೆ. ಈ ರೀತಿ ಮಾತನಾಡಿದ ಸಂಭಾಷಣೆಗಳನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ಸದರಿ ಸಂಭಾಷಣೆಯನ್ನು ಒಂದು ಡಿ.ವಿ.ಡಿಗೆ ಅವರು ವರ್ಗಾಯಿಸಿಕೊಂಡಿರುತ್ತಾರೆ.

3) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 31/05/2019 ರಂದು ಬೆಳಿಗ್ಗೆ 10–05 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಹಾವೇರಿ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 05/2019 ಪಿ.ಸಿ. ಕಾಯಿದೆ ಕಲಂ 7(ಎ) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4) ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ರಾಘವೇಂದ್ರ ತಂದೆ ವೆಂಕಟೇಶ ಗೆಜ್ಜಿ ಮತ್ತು ಬಸವಣೆಪ್ಪ ತಂದೆ ಷಣ್ಮುಖಪ್ಪ ಮೆಣಸಿನಕಾಯಿ ಇವರನ್ನು ಬರಮಾಡಿಕೊಂಡು, ತನಿಖಾಧಿಕಾರಿಗಳು ಪಂಚರುಗಳ ಪರಿಚಯ ಮಾಡಿಕೊಂಡಿರುತ್ತಾರೆ ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ಪ್ರಥಮ ವರ್ತಮಾನ ವರದಿಯನ್ನು ಮತ್ತು ಫಿರ್ಯಾದಿಯ ನಕಲು ಪ್ರತಿಯನ್ನು ನೀಡಿ ಓದಲು ತಿಳಿಸಿರುತ್ತಾರೆ. ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡ ಸಂಭಾಷಣೆಯನ್ನು ಒಂದು ನೋವಾ ಪ್ರೋ ಕಂಪನಿ ಡಿವಿಡಿಯಲ್ಲಿ ಡೌನಲೋಡ್ ಮಾಡಿಕೊಂಡು ಬಂದು ಹಾಜರಪಡಿಸಿದ ಸಿಡಿಯನ್ನು ಪಂಚರಿಗೆ ಕೇಳಿಸಿರುತ್ತಾರೆ. ಎದುರುದಾರರು ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆಯಿಟ್ಟಿರುವುದು ಕಂಡುಬರುತ್ತದೆ. ನಂತರ ತನಿಖಾಧಿಕಾರಿಗಳು ಲ್ಯಾಪಟಾಪ್ ಮುಖಾಂತರ ಸಿಡಿಗೆ ಡೌನಲೋಡ್ ಮಾಡಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರಿಗೆ ಕೊಡಲು ತಂದ ಲಂಚದ ಹಣವನ್ನು ಪಂಚರ ಸಮಕ್ಷಮ ಹಾಜರುಪಡಿಸಲು ಹೇಳಿದಾಗ ದೂರುದಾರರು ರೂ. 2,000/- ಮುಖಬೆಲೆಯ 8 ನೋಟು ಹಾಗೂ ರೂ. 500/- ಮುಖಬೆಲೆಯ 8 ನೋಟುಗಳು ಒಟ್ಟು ರೂ.20,000/- ಗಳನ್ನು

ಹಾಜರಪಡಿಸಿದಾಗ ತನಿಖಾಧಿಕಾರಿಗಳು ಪಂಚರಿಗೆ ಎಣಿಸಿ ಅವುಗಳ ಮೌಲ್ಯ ಮತ್ತು ನಂಬರಗಳನ್ನು ಪ್ರತ್ಯೇಕ ಬಿಳಿ ಹಾಳೆಯಲ್ಲಿ ಬರೆದುಕೊಳ್ಳಲು ತಿಳಿಸಿದಂತೆ ಪಂಚ-1 ರವರು ನೋಟಿನ ಮೇಲಿನ ನಂಬರಗಳನ್ನು ಓದಿ ಹೇಳಿದಾಗ ಪಂಚ-2 ರವರು ಒಂದು ಪ್ರತ್ಯೇಕ ಬಿಳಿ ಹಾಳೆಯಲ್ಲಿ ನೋಟಿನ ಮೌಲ್ಯ ಹಾಗೂ ನಂಬರಗಳನ್ನು ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ ಲಂಚದ ಹಣದ ನೋಟುಗಳಿಗೆ ತಮ್ಮ ಸಿಬ್ಬಂದಿಯವರ ಮುಖಾಂತರ ಫಿನಾಪ್ತಲಿನ್ ಪೌಡರನ್ನು ನೋಟಿನ್ ಎರಡು ಮಗ್ಗಲಿಗೆ ಸವರಿಸಿರುತ್ತಾರೆ. ತನಿಖಾಧಿಕಾರಿಗಳು ಪಂಚ 2 ರವರಿಗೆ ದೂರುದಾರರ ಅಂಗಶೋಧನೆ ಮಾಡಲು ತಿಳಿಸಿದಾಗ ಅವರು ದೂರುದಾರರ ಶರ್ಟ ಪ್ಯಾಂಟನ್ನು ಚೆಕ್ ಮಾಡಿದ್ದು, ಪ್ಯಾಂಟಿನ್ ಕಿಸೆಯಲ್ಲಿ ತನ್ನ ಖರ್ಚಿಗೆ ಇಟ್ಟುಕೊಂಡಿದ್ದ ಒಂದು ನೀಲಿ ಬಣ್ಣದ ಪರ್ಸ, 410 ರೂ. ಒಂದು ಸ್ಯಾಮಸಂಗ್ ಮೊಬೈಲ್ ಇನ್ನೊಂದು ಒಪೋ ಮೊಬೈಲ್, ಎರಡು ಸಿಲ್ವರ ಕಲರ್ ಮೊಬೈಲ್‌ಗಳು, ಬೇರೆ ಬೇರೆ ಬ್ಯಾಂಕಿನ ಎಟಿಎಮ್ ಕಾರ್ಡಗಳು, ಚುನಾವಣಾ ಗುರುತಿನ ಚೀಟಿ, ಡ್ರೈವಿಂಗ್ ಲೈಸೆನ್ಸ್, ಒಂದು ಬಿಳಿ ಬಣ್ಣದ ಖರ್ಚಿಪ್ ಬೈಕ್ ಕೀ ಅವುಗಳನ್ನು ಅಲ್ಲಿಯೇ ಬಿಟ್ಟು ಅವರ ಪ್ಯಾಂಟ್ ಬಲಜೇಬು ಖಾಲಿ ಇರುವುದನ್ನು ಖಚಿತಪಡಿಸಿಕೊಂಡಾಗ ತನಿಖಾಧಿಕಾರಿಗಳು ಪಂಚ-1 ರವರಿಗೆ ನೋಟುಗಳನ್ನು ಮತ್ತೊಮ್ಮೆ ಎಣಿಸಿ ದೂರುದಾರರ ಪ್ಯಾಂಟ್ ಬಲಜೇಬಿನಲ್ಲಿ ಇರಿಸಲು ತಿಳಿಸಿದಂತೆ ಅವರು ಫಿನಾಪ್ತಲಿನ್ ಪುಡಿ ಸವರಿದ ನೋಟುಗಳ ದೂರುದಾರರ ಪ್ಯಾಂಟ್ ಬಲಜೇಬಿನಲ್ಲಿ ಇರಿಸಿರುತ್ತಾರೆ. ಬಳಿಕ ತನಿಖಾಧಿಕಾರಿಗಳು ಹೇಳಿದಂತೆ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಪಂಚ-1 ರವರು ತಮ್ಮ ಎರಡು ಕೈಗಳ ಹಸ್ತದ ಬೆರಳುಗಳನ್ನು ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರ ಬಳಿ ಹೋಗಿ ಅಲ್ಲಿ ಎದುರುದಾರರನ್ನು ಭೇಟಿ ಮಾಡಿ ಎದುರುದಾರರು ಕೇಳಿರುವ ಹಣವನ್ನು ತಂದಿರುವುದಾಗಿ ಅವರಿಗೆ ತಿಳಿಸಬೇಕು, ಎದುರುದಾರರು ಕೇಳಿದಾಗ ಮಾತ್ರ ಅವರಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ಕೊಡಬೇಕೆಂದು ಆ ನೋಟುಗಳನ್ನು ಎದುರುದಾರರು ಸ್ವೀಕರಿಸಿದರೆ, ನಂತರ ಅಲ್ಲಿಂದ ಹೊರಗಡೆ ಬಂದು ತಮ್ಮ ಕೈಯನ್ನು ತಲೆಯ ಮೇಲೆ ಸವರಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡುವಂತೆ ತಿಳಿಸಿರುತ್ತಾರೆ. ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ದೂರುದಾರರು ಮತ್ತು ಎದುರುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಂಡು, ವಿದ್ಯಾಮಾನಗಳನ್ನು ಗಮನಿಸಿ, ನಂತರ ಈ ಬಗ್ಗೆ ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ತಮ್ಮ ಠಾಣೆಯಲ್ಲಿದ್ದ ವಾಯ್ಸ್ ರೆಕಾರ್ಡನ್ನು ನೀಡಿ ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ಆನ್ ಮಾಡಿಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 31/05/2019 ರಂದು ಬೆಳ್ಳಿಗೆ 10:30 ಘಂಟೆಯಿಂದ 11:30

ಘಂಟೆಯವರೆಗೆ ಹಾವೇರಿ ಎಸಿಬಿ ಕಛೇರಿಯಲ್ಲಿ ಲ್ಯಾಪಟಾಪ್ ಮೂಲಕ ಗಣಕೀಕರಣ ಮಾಡಿದ ವಹಿಸಿಕೊಡುವ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5) ತನಿಖಾಧಿಕಾರಿಗಳು ದಿ: 31/05/2019 ರಂದು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಒಂದು ಸರಕಾರಿ ಜೀಪ್ ನಂ. ಕೆ.ಎ..04 –ಜಿ–1293 ಮತ್ತು ಖಾಸಗಿ ಬೈಕ್ ನಂ. ಕೆ.ಎ. 27–ಇಜೆ–1765 ವಾಹನಗಳಲ್ಲಿ ಹೊರಟು ದೇವಗಿರಿ ಹೋಗುವ ಮಾರ್ಗವಾಗಿ ಡಿ.ಸಿ. ಆಫೀಸಿಗೆ ಬಂದು ತಲುಪಿದಾಗ ತನಿಖಾಧಿಕಾರಿಗಳು ದೂರುದಾರರಿಗೆ ಸೋನಿ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಳ್ಳಲು ತಿಳಿಸಿ ದೂರುದಾರರಿಗೆ ಹಾಗೂ ನೆರಳು ಸಾಕ್ಷಿಯಾದ ರಾಘವೇಂದ್ರರವರಿಗೆ ವಹಿಸುವಿಕೆ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆ ಹಾಗೂ ತಿಳುವಳಿಕೆಗಳನ್ನು ಮತ್ತೊಮ್ಮೆ ನೆನಪಿಸಿ ನಿಮ್ಮನ್ನು ಭೇಟಿಯಾಗಲು ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ಡಿ.ಸಿ. ಆಫೀಸಿನ 'ಸಿ' ಬ್ಲಾಕ್, ಕರ್ನಾಟಕ ಹೌಸಿಂಗ್ ಬೋರ್ಡ್ ಕಛೇರಿಯ ಒಳಗಡೆ ಹೋದಾಗ ದೂರುದಾರರು ಎದುರುದಾರರ ಬಳಿ ಹೋಗಿ ಮಾತನಾಡಿಸಿ ತನಗೆ ಸಂಬಂಧಿಸಿದ ಚೆಕ್ ಬಗ್ಗೆ ಮಾತನಾಡಿರುತ್ತಾರೆ. ಆಗ ಎದುರುದಾರರು ದೂರುದಾರರ ಕಡೆಯಿಂದ ಪಿನಾಪ್ತಲಿನ್ ಪುಡಿ ಲೇಪಿತ 20,000/- ರೂ. ಲಂಚದ ಹಣವನ್ನು ಇಸಿದುಕೊಂಡು ಅದನ್ನು ಒಂದು ಖಾಕಿ ಕವರಿನಲ್ಲಿ ಹಾಕಿ ಎದುರುದಾರರು ಕೂತು ಕೆಲಸ ಮಾಡುವ ಟೇಬಲ್ಲಿನ ಎಡಭಾಗದ ಕಪಾಟಿನ ಒಳಗಡೆ ಇಟ್ಟು ಬೀಗ ಹಾಕಿರುತ್ತಾರೆ. ನಂತರ ದೂರುದಾರರು ಕಛೇರಿಯಿಂದ ಹೊರಗಡೆ ಬಂದು ತನಿಖಾಧಿಕಾರಿಯವರು ವಹಿಸುವಿಕೆ ಪಂಚನಾಮೆಯ ಕಾಲಕ್ಕೆ ನೀಡಿದ ಸೂಚನೆಯಂತೆ ತಮ್ಮ ಕೈಯಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಲಂಚದ ಹಣದ ಸಮೇತ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 20,000/- ರೂ.ಗಳನ್ನು ಎದುರುದಾರರಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ನೆರಳು ಸಾಕ್ಷಿದಾರರು ತನಿಖಾಧಿಕಾರಿಯವರಿಗೆ ಎದುರುದಾರರು ದೂರುದಾರರಿಂದ ಲಂಚದ ಹಣವಾದ 20,000/- ರೂಪಾಯಿಗಳನ್ನು ಇಸಿದುಕೊಂಡಿರುವುದನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈಯನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರು ಲಂಚದ ಹಣವನ್ನು ಪಡೆದು ಖಾಕಿ ಲಕೋಟೆಯಲ್ಲಿಟ್ಟಿದ್ದ ಲಕೋಟೆಯನ್ನು ಕತ್ತರಿಸಿ ಅದರ ಒಳಭಾಗವನ್ನು ಹತ್ತಿಯಿಂದ ಒರೆಸಿ ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ

ತೊಳೆದಾಗ ಅದೂ ಸಹ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರು ಲಂಚದ ಹಣವನ್ನು ಸ್ವೀಕರಿಸಿ ತಮ್ಮ ಟೇಬಲ್ಲಿನ ಎಡಬದಿಯ ಕಪಾಟಿನ ಒಳಗೆ ಇರಿಸಿದ್ದ ಸ್ಥಳವನ್ನು ಹತ್ತಿಯಿಂದ ಒರೆಸಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದೂ ಸಹ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಸದರಿ ದ್ರಾವಣಗಳನ್ನು ಒಣಗಿಸಿದ ಹತ್ತಿಯನ್ನು ಹಾಗೂ ಖಾಕಿ ಲಕೋಟೆಯನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ಅದಾದ ಮೇಲೆ ತನಿಖಾಧಿಕಾರಿಗಳು ಟ್ರಾಪ್ ಕಾಲಕ್ಕೆ ವಾಯ್ಸ್ ರೆಕಾರ್ಡರ್‌ನಲ್ಲಿ ದಾಖಲಾದ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ನಲ್ಲಿ ಆನ್ ಮಾಡಿ ಪಂಚರಿಗೆ ಕೇಳಿಸಿ ನಂತರ ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ಅಳವಡಿಸಿ ಡೌನ್ ಲೋಡ್ ಮಾಡಿ ಸಿ.ಡಿ.ಗೆ ವರ್ಗಾಯಿಸಿಕೊಂಡು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಸ್ವ ರಕ್ಷಣಾ ಹೇಳಿಕೆಯನ್ನು ಬರೆದುಕೊಡಲು ತಿಳಿಸಿರುತ್ತಾರೆ. ಅದರಲ್ಲಿ ಎದುರುದಾರರು "ಕರ್ನಾಟಕ ಗೃಹ ಮಂಡಳಿ ಜಿಲ್ಲಾ ಯೋಜನಾ ಕಛೇರಿಗೆ ಶ್ರೀ ದೀಪಕ್ ಯಲ್ಲಪ್ಪ ಹೊನ್ನಪ್ಪನವರ ಇವರು ಮಲ್ಲಿಕ್ ಟ್ರಾವೆಲ್ಸ್ ಏಜೆನ್ಸಿ ಮೂಲಕ ಬಾಡಿಗೆ ಆಧಾರದಲ್ಲಿ ಯಾವುದೇ ವಾಹನ ಪೂರೈಸಿರುವುದಿಲ್ಲ. ಈ ಹಿಂದೆ ಸ್ವಾಮಿ ಟ್ರಾವೆಲ್ಸ್ ಗದಗ ಇವರ ವಾಹನ ಪೂರೈಸಿದ ಕುರಿತು ಜಿ.ಎಸ್.ಟಿ. ಇಲ್ಲದ್ದರಿಂದ 3 ತಿಂಗಳ ಅವಧಿಯ ಬಿಲ್ಲುಗಳನ್ನು ಪಾಸ್ ಆಗುವುದಿಲ್ಲ ಎಂದು ನನ್ನಲ್ಲಿ ತಿಳಿಸಿದ್ದು ಅವರು ನನಗೆ ಹಾವೇರಿಯಲ್ಲಿ ಯಾವುದಾದರೂ ಏಜೆನ್ಸಿ ಪರಿಚಯವಿದ್ದಲ್ಲಿ ಬಿಲ್ಲುಗಳನ್ನು ಮಾಡಿಕೊಡಲು ತಿಳಿಸಿದ್ದರಿಂದ ಶ್ರೀ ದೀಪಕ್ ಯಲ್ಲಪ್ಪ ಹೊನ್ನಪ್ಪನವರ ಇವರಿಗೆ ತಿಳಿಸಿರುತ್ತೇನೆ. ಅದರಂತೆ ಅವರು ಬಿಲ್ಲುಗಳನ್ನು ನೀಡಿದ್ದರಿಂದ ಬಿಲ್ ಪಾಸ್ ಆಗಿ ಅವರಿಗೆ ಅವರು ನೀಡಿದ ಮಲ್ಲಿಕ್ ಟ್ರಾವೆಲ್ಸ್ ಇವರ ಹೆಸರಿನಲ್ಲಿ ಚೆಕ್ ನೀಡಿರುತ್ತಾರೆ. ಅದರಂತೆ ಹಣವನ್ನು ಸ್ವಾಮಿ ಟ್ರಾವೆಲ್ಸ್ ಗದಗ ಇವರಿಗೆ ಕಳುಹಿಸಲು ತಿಳಿಸಿರುತ್ತೇನೆ. ಇದರಲ್ಲಿ ನಾನು ಯಾವುದೇ ರೀತಿಯ ಹಣಕ್ಕಾಗಿ ಇವರಲ್ಲಿ ಬೇಡಿಕೆ ಇಟ್ಟಿರುವುದಿಲ್ಲ. ಶ್ರೀ ದೀಪಕ್ ಯಲ್ಲಪ್ಪ ಹೊನ್ನಪ್ಪನವರ ಬಿಲ್ಲಿನ ಹಣದ ಪೈಕಿ ರೂ. 20,000-00 ಗಳನ್ನು ನೀಡುತ್ತಾ ಉಳಿದ ಹಣ ಬ್ಯಾಂಕನಲ್ಲಿ ಬೇರೆ ಖಾತೆಗೆ ವರ್ಗಾಯಿಸುವ ಕಾರಣ ಉಳಿದ ಹಣ ತಂದು ಕೊಡುವುದಾಗಿ ಈ ಕುರಿತು ಸಂಬಂಧಿಸಿದ ಏಜೆನ್ಸಿಯವರಿಗೆ ತಿಳಿಸಲು ನೀಡಿರುತ್ತಾರೆ. ಆಗ ತಮ್ಮ ಇಲಾಖೆಯವರು ಟ್ರಾಪ್ ಮಾಡಿದರು. ನಾನು ಅವರಿಗೆ ಹಣದ ಬೇಡಿಕೆಯಾಗಲೀ ಅಥವಾ ಬೇರೆ ಬಿಲ್ಲುಗಳನ್ನು ಪಾಸ್ ಮಾಡಿಸಿ ಚೆಕ್ ನೀಡುವ ಭರವಸೆಯನ್ನಾಗಲೀ ನೀಡಿರುವುದಿಲ್ಲ ಹಾಗೂ ರೂ. 8,325/- ಗಳು ಕಛೇರಿಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಸದರಿ ವಾಹನದ ಬಾಡಿಗೆ ಬಿಲ್ಲುಗಳನ್ನು ನನ್ನ ಹಾವೇರಿ ಕಛೇರಿಗಾಗಲೀ ಇಲಾಖೆಗೆ ಸಂಭಂದಿಸಿದ್ದು ಇರುವುದಿಲ್ಲ ಈ ಪ್ರಸ್ತಾಪವು ಸ್ವಾಮಿ ಟೂರ್ಸ್ ಎಂಡ್ ಟ್ರಾವಲ್ಸ್ ಗದಗ ಇವರಿಗೆ ಸಂಬಂಧಿಸಿದ್ದು ಇದರಲ್ಲಿ ನನ್ನ ವೈಯಕ್ತಿಕವಾಗಿಯಾಗಲೀ ಅಥವಾ ಇಲಾಖೆಗೆ ಸಂಬಂಧಿಸಿದ್ದಾಗಲೀ ಇರುವುದಿಲ್ಲ. ಇದರಲ್ಲಿ ನನ್ನ

ತಪ್ಪು ಇರುವುದಿಲ್ಲ" ಎಂದು ಹೇಳಿಕೆ ನೀಡಿದ್ದನ್ನು ದೂರುದಾರರಿಗೆ ಹಾಗೂ ಪಂಚರಿಗೆ ತೋರಿಸಿದಾಗ ಅವರು ಎದುರುದಾರರು ತಮ್ಮ ಸ್ವ ರಕ್ಷಣಾ ಹೇಳಿಕೆಯ ವಿಷಯವನ್ನು ನಾವು ಒಪ್ಪುವುದಿಲ್ಲ" ಅಂತ ಬರೆದು ದೂರುದಾರರು ಹಾಗೂ ಪಂಚರು ಸಹಿ ಮಾಡಿರುತ್ತಾರೆ.

6) ಎದುರುದಾರರಿಗೆ ದಿನಾಂಕ 06/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 25/10/2021 ರಂದು ಸಲ್ಲಿಸಿರುತ್ತಾರೆ. ಎದುರುದಾರರು ಸಲ್ಲಿಸಿದ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ ಕರ್ನಾಟಕ ಗೃಹ ಮಂಡಳಿಯು ಸರ್ಕಾರಿ ಸೌಮ್ಯದ ಇಲಾಖೆಯಾಗಿದ್ದು, ಇಲಾಖೆಯದೆ ಆದ ಅಧಿನಿಯಮಗಳು ಇರುತ್ತವೆ. ಅದರ ಅಧಿನಸ್ಥದಲ್ಲಿರುವ ಅಧಿನಿಯಮಗಳಯಡಿಯಲ್ಲಿ ಯಾವುದೇ ಇಲಾಖಾ ವಿಚಾರಣೆಯನ್ನು ನಡೆಸುವ ಅಧಿಕಾರ ಮಂಡಳಿಯ ವಿವೇಚನೆಗೆ ಸೀಮಿತವಾಗಿರುತ್ತದೆಂದು ಹೇಳಿ ತಾನು ಈ ಬಗ್ಗೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪೆಟಿಷ್‌ನ್ ನಂ. 46539/2018 ಹಾಕಿದ್ದು, ಅದರ ಆದೇಶದ ಪ್ರತಿಯನ್ನು ಲಗತ್ತಿಸಿರುತ್ತಾರೆ. ರಿಟ್ ಪೆಟಿಷನ್ ಆದೇಶವನ್ನು ಪರಿಶೀಲಿಸದಾಗ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯವು ತಮ್ಮ ಆದೇಶದಲ್ಲಿ ಒಂದನೇ ಎದುರುದಾರರಾದ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತರು ಮಾಡಿದ 12(3) ವರದಿಯನ್ನು ಸಲ್ಲಿಸಿದ ನಂತರ ಅವರು ಅದನ್ನು ಎದುರುದಾರರ ನಂ. 2 ರವರಾದ ಆಯುಕ್ತರು, ಕರ್ನಾಟಕ ಹೌಸಿಂಗ್ ಬೋರ್ಡರವರಿಗೆ ಸಲ್ಲಿಸಿದಾಗ ಅವರು ತನಿಖಾಧಿಕಾರಿಯನ್ನು ನೇಮಿಸಬಹುದಾಗಿರುತ್ತದೆ ಎಂದು ನಮೂದು ಇರುತ್ತದೆ. ಹಾಗಾಗಿ ಎದುರುದಾರರು ನೀಡಿರುವ ಸಮಜಾಯಿಷಿ ಅಂಶದ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬರುವುದಿಲ್ಲ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದಿ: 31/05/2019 ರಂದು ಎದುರುದಾರರು ದೂರುದಾರರಿಂದ ರೂ. 20,000/- ಲಂಚದ ಹಣವನ್ನು ಪಡೆಯುವ ಮೂಲಕ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

8) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಪರಶುರಾಮ ಹನುಮಂತಪ್ಪ ಬಾವಿಕಟ್ಟಿ @ ರಡ್ಡಿ, ಪ್ರಥಮ ದರ್ಜೆ ಸಹಾಯಕರು, ಕರ್ನಾಟಕ ಹೌಸಿಂಗ್ ಬೋರ್ಡ್ ಕಛೇರಿ, ಹಾವೇರಿ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,

ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

9) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

25/5/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು.